ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ
ದಿನಾಂಕ : DATE: 9/1/21

# ಸದನ ಸಮಿತಿಗೆ ವಿಘ್ನ : ಸಭಾಪತಿಗೆ ಮುಖಭಂಗ

## ವಿಶ್ವನಾಥ್, ಸಂಕನೂರ ರಾಜಿನಾಮೆ । ಸದನ ಸಮಿತಿ ರಚನೆಯಲ್ಲಿ ಪಕ್ಷಪಾತ

- ಮರಿತಿಬ್ಬೇಗೌಡರಿಂದ ನಿಷ್ಪಕ್ಷಪಾತ ತನಿಖೆ ' ಸಾಧ್ಯವಿಲ್ಲ
- ಧರ್ಮೇಗೌಡರ ಸಾವಿನ ಬಗ್ಗೆ ಉನ್ನತ ತನಿಖೆ ಅಗತ್ಯ

ಸಂ.ಕ.ಸಮಾಚಾರ ಬೆಂಗಳೂರು 9/1/21

ವಿಧಾನಪರಿಷತ್‌ನಲ್ಲಿ ಡಿಸೆಂಬರ್ 15ರ ಘಟನೆಯಿಂದ ಇನ್ನೂ ಪಾಠ ಕಲಿಯದ ರಾಜ್ಯದ ರಾಜಕಾರಣಿಗಳು ದಿನಗಳೆದಂತೆ ಇಡೀ ಪ್ರಕರಣವನ್ನು ಜಟಿಲಗೊಳಿಸುತ್ತ ಸಾಗಿದ್ದಾರೆ. ಇದೀಗ ವಿಧಾನಪರಿಷತ್ ಗದ್ದಲಕ್ಕೆ ಸಂಬಂಧಿಸಿದಂತೆ ಸಭಾಪತಿ ಕೆ.ಪ್ರತಾಪ್‌ಚಂದ್ರ ಶೆಟ್ಟಿ ರಚಿಸಿದ್ದ ಸದನ ಸಮಿತಿಗೆ ಬಿಜೆಪಿಯ ಇಬ್ಬರು ಸದಸ್ಯರು ರಾಜಿನಾಮೆ ನೀಡುವ ಮೂಲಕ ಸಭಾಪತಿಗಳಿಗೆ ಮುಖಭಂಗ ಉಂಟು ಮಾಡಿದ್ದಾರೆ.

ಶುಕ್ರವಾರ ವಿಧಾನಸೌಧದಲ್ಲಿ ನಡೆದ ಪರಿಷತ್ ಗದ್ದಲ ಸಂಬಂಧದ ಸದನ ಸಮಿತಿ ಸಭೆ ಆರಂಭವಾಗುತ್ತಿದ್ದಂತೆಯೇ ಬಿಜೆಪಿ ಸದಸ್ಯರಾದ ಎಚ್.ವಿಶ್ವನಾಥ್ ಹಾಗೂ ಎಸ್.ವಿ.ಸಂಕನೂರ ಸಮಿತಿ ಅಧ್ಯಕ್ಷ ಮರಿತಿಬ್ಬೇಗೌಡ ಅವರಿಗೆ ರಾಜೀನಾಮೆ ಸಲ್ಲಿಸಿದರು. ಈ ವೇಳೆ ಸಮಿತಿ ಅಧ್ಯಕ್ಷ ಮರಿತಿಬ್ಬೇಗೌಡ, ನೀವು ರಾಜಿನಾಮೆ ಕೊಡುವುದು ಬೇಡ, ಸಭೆಯಲ್ಲಿ ಕುಳಿತುಕೊಳ್ಳಿ, ಈ ಬಗ್ಗೆ ಚರ್ಚಿಸಿ ಆಮೇಲೆ ತೀರ್ಮಾನಿಸಿ ಎಂದು ಸಲಹೆ ನೀಡಿದರು.

ಆದರೆ ಸಮಿತಿ ಅಧ್ಯಕ್ಷರ ಮಾತನ್ನು ಗಣನೆಗೆ ತೆಗೆದುಕೊಳ್ಳದ ವಿಶ್ವನಾಥ್ ಹಾಗೂ ಸಂಕನೂರ ತಮ್ಮ ರಾಜಿನಾಮೆ ಪತ್ರಗಳನ್ನು ಕೊಟ್ಟು ಸಭೆಯಿಂದ ನಿರ್ಗಮಿಸಿಯೇ ಬಿಟ್ಟರು. ಆ ಬಳಿಕ ಕಾಂಗ್ರೆಸ್‌ನಿಂದ ನೇಮಕಗೊಂಡ ಬಿ.ಕೆ.ಹರಿಪ್ರಸಾದ್ ಮತ್ತು ಆರ್.ಬಿ.ತಿಮ್ಮಾಪುರ ಮಾತ್ರ ಸಭೆಯಲ್ಲಿ ಪಾಲ್ಗೊಂಡರು.

ಸಭೆ ಬಳಿಕ ಮಾತನಾಡಿದ ಬಿಜೆಪಿ ಸದಸ್ಯ ವಿಶ್ವನಾಥ್, ಡಿ.15ರಂದು ವಿಧಾನಪರಿಷತ್‌ನಲ್ಲಿ ನಡೆದ ಗಲಾಟೆಯಿಂದ ಇಡೀ ದೇಶವೇ ತಲೆತಗ್ಗಿಸುವಂತಾಗಿದೆ. ಅಂದಿನ ಗಲಭೆಯಲ್ಲಿ ಮರಿತಿಬ್ಬೇಗೌಡರು ಸೇರಿದಂತೆ ಸದನ ಸಮಿತಿ ಇತರ ಸದಸ್ಯರೂ ಭಾಗವಹಿಸಿದ್ದರು. ಇದರಿಂದ ನಿಷ್ಪಕ್ಷಪಾತವಾಗಿ ತನಿಖೆ ಸಾಧ್ಯವೇ ಎಂದು ಪ್ರಶ್ನಿಸಿದರು.



ಉಪಸಭಾಪತಿ ಮರ್ಯಾದೆ ಹತ್ಯೆ

ಸದನ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಭಾಗವಹಿಸಿರುವಾಗ ಸದನ ಸಮಿತಿ ಸಭೆ ನಡೆಸಲು ಹೇಗೆ ಸಾಧ್ಯ? ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರ ಕರ್ನಾಟಕದ ವಿಧಾನಪರಿಷತ್ ಉಪಸಭಾಪತಿಂತವಾಗಿದ್ದ ಧರ್ಮೇಗೌಡ ಅವರ ಆತ್ಮಹತ್ಯೆ ಕುರಿತಂತೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ಮನವಿ ಮಾಡಿದ್ದಾರೆ. ಮರಿತಿಬ್ಬೇಗೌಡರ ಅಧ್ಯಕ್ಷತೆಯ ಸದನ ಸಮಿತಿಯಿಂದ ಸತ್ಯಾಂಶ ಹೊರಬರಲು ಸಾಧ್ಯವಿಲ್ಲ ಎಂದು ಹೇಳಿದರು.

ನಾವು ಈಗಲೂ ಧರ್ಮೇಗೌಡ ಅವರ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಒತ್ತಾಯಿಸುತ್ತೇವೆ. ಇದರಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ. ಹೀಗಾಗಿ ನಾವಿಬ್ಬರು ಸಮಿತಿಯ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಹಿಷ್ಕರಿಸಿದ್ದೇವೆ. ಉಳಿದದ್ದು ಅವರ ತೀರ್ಮಾನಕ್ಕೆ ಬಿಟ್ಟಿದ್ದು ಎಂದರು.

ಕಳೆದ ಡಿ.15ರಂದು ವಿಧಾನಪರಿಷತ್ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ ಅವರ ವಿರುದ್ಧ ಬಿಜೆಪಿ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದರಿಂದ ಕೋಲಾಹಲವೇ ಉಂಟಾಗಿತ್ತು. ಅಂದು ಸಭಾಪತಿ ಪೀಠದ ಮೇಲೆ ಉಪಸಭಾಪತಿಯಾಗಿದ್ದ ಎಸ್. ಎಲ್.ಧರ್ಮೇಗೌಡರು ಕೂತಿದ್ದ ವೇಳೆ ಕಾಂಗ್ರೆಸ್ ಸದಸ್ಯರು ಅವರನ್ನು ಬಲವಂತವಾಗಿ ಎಳೆದೊಯ್ದಿದ್ದರು. ಇದಾದ ಕೆಲವು ದಿನಗಳ ನಂತರ ಧರ್ಮೇಗೌಡ ಅವರು ಆತ್ಮಹತ್ಯೆ ಮಾಡಿಕೊಂಡಿದ್ದರು.

ಈಚೆಗೆ ಸಭಾಪತಿ ಪ್ರತಾಪ್‌ಚಂದ್ರಶೆಟ್ಟಿ ಅವರು ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ನೇತೃತ್ವದಲ್ಲಿ ಸದನ ಸಮಿತಿ ರಚನೆ ಮಾಡಿದರು. ನಿನ್ನೆಯಷ್ಟೇ ಆಯನೂರು ಮಂಜುನಾಥ್, ಸಮಿತಿಯ ಅಧ್ಯಕ್ಷ ಮರಿತಿಬ್ಬೇಗೌಡ ಅವರು ಸದನದಲ್ಲಿ ಕಾಂಗ್ರೆಸ್ ಸದಸ್ಯರಂತೆ ವರ್ತಿಸುತ್ತಾರೆ ಹಾಗೂ ಗಲಾಟೆಯಲ್ಲಿ ಭಾಗಿಯಾದ ಸದಸ್ಯರನ್ನೇ ಸಮಿತಿ ರಚನೆ ಮಾಡಿದ್ದಾರೆ ಎಂದು ದೂರಿದ್ದರು.